Rotary

# JASMINE

ಜಾಸ್ಮಿನ್ जास्मिन

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



**Rtn. Dr. Stephanie Urchick**
R. I. President



**Rtn. MPHF CA Dev Anand**
Dist. Governor



**Rtn. Judith Mendonca**
President

Volume 39 | Issue - 14 | 3rd October 2024

## CLUB ASSEMBLY

Time : 7.00 p.m.
Venue : Hotel Shivaprasad Grand, Kundapura



**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor

39th year of Service and Fellowship

# ಸಂಪಾದಕೀಯ.... :



ಕಾರ್ಯದೊತ್ತಡದಿಂದ ಹಲವು ದಿನಗಳ ನಂತರ ಲೇಖನಿಯನ್ನು ಕೈಗೆತ್ತಿಕೊಂಡಿದ್ದೇನೆ. ಕ್ಷಮೆಯಿರಲಿ.

ರಾಷ್ಟ್ರಾದ್ಯಂತ ಸಂಭ್ರಮ ಸಡಗರದಿಂದ ಆಚರಿಸುವ ನವರಾತ್ರಿ ಹಬ್ಬವು ಸನಿಹ ಬಂದಿದೆ. ಮಕ್ಕಳಿಗೋ ದಸರಾ ರಜೆಯ ಸಂಭ್ರಮವೋ ಸಂಭ್ರಮ. ಒಂಭತ್ತು ರಾತ್ರಿಗಳ ಕಾಲ ನಡೆಯುವ ಈ ಹಬ್ಬದಲ್ಲಿ ದುರ್ಗಾದೇವಿಯ ವಿವಿಧ ರೂಪಗಳನ್ನು ಪೂಜಿಸಲಾಗುತ್ತದೆ. ಈ ಹಬ್ಬದ ಹಿಂದೆ ಅನೇಕ ಪುರಾಣ ಕಥೆಗಳು & ಆಧ್ಯಾತ್ಮಿಕ ಮಹತ್ವಗಳಿವೆ. ಪುರಾಣಗಳ ಪ್ರಕಾರ ರಾಕ್ಷಸರಾಜ ಮಹಿಷಾಸುರನನ್ನು ದುರ್ಗಾದೇವಿಯು ಸಂಹಾರ ಮಾಡಿದ ವಿಜಯ ಸಂಭ್ರಮವೇ ಈ ನವರಾತ್ರಿ ಆಚರಣೆ. ನವರಾತ್ರಿಯು ಶಕ್ತಿಯ ಆರಾಧನೆಯನ್ನು ಪ್ರತಿನಿಧಿಸುತ್ತದೆ. ರಾಮಾಯಣದಲ್ಲಿ ರಾಮ–ರಾವಣ ಯುದ್ಧದಲ್ಲಿ ರಾವಣ ಸಂಹಾರ ನಡೆದದ್ದೂ ಇದೇ ಪರ್ವಕಾಲದಲ್ಲಿ ಎಂಬ ಉಲ್ಲೇಖವಿದೆ. ಮಹಾಭಾರತದಲ್ಲಿ ಪಾಂಡವರ ಅಜ್ಞಾತವಾಸ ಪೂರ್ಣಗೊಂಡಿದ್ದೂ ವಿಜಯದಶಮಿಯಂದು. ಹಾಗಾಗಿ ಪಾಂಡವರು ಬಚ್ಚಿಟ್ಟಿದ್ದ ಆಯುಧಗಳನ್ನು ಹೊರತೆಗೆದ ದಿನವಾಗಿ ಈಗಲೂ ಆಯುಧ ಪೂಜೆ ಮಾಡುವ ಸಂಪ್ರದಾಯ ರೂಢಿಯಲ್ಲಿದೆ.

ಒಟ್ಟಾರೆಯಾಗಿ ಇದು ನಮ್ಮಲ್ಲಿ ದೈವತ್ವವನ್ನು ಜಾಗೃತಿಗೊಳಿಸುವ ಒಂದು ಸುಸಂದರ್ಭ. ದುರ್ಗಾದೇವಿಯಂತೇ ನಾವೂ ನಮ್ಮ ಒಳಗಿನ ಶಕ್ತಿಯನ್ನು ಬಳಸಿಕೊಂಡು ಕಷ್ಟಗಳನ್ನು ಜಯಿಸಬಹುದೆಂಬ ವಿಶ್ವಾಸವನ್ನು ನೀಡುತ್ತದೆ. ಇನ್ನು ಈ 9 ದಿನಗಳ ಕಾಲ ಮಾಡುವ ಉಪವಾಸ –ಜಪ, ಧ್ಯಾನಗಳಿಗೆ ಧಾರ್ಮಿಕ ಹಿನ್ನಲೆಯೊಂದಿಗೆ ವೈಜ್ಞಾನಿಕ ಕಾರಣಗಳನ್ನು ಹೊಂದಿವೆ. ಮಳೆಗಾಲ ಕಳೆದು ಚಳಿಗಾಲ ಆರಂಭವಾಗುವ ಋತು ಬದಲಾವಣೆಯ ಋತು ಸಂಧಿಕಾಲವಾದ್ದರಿಂದ ಉಪವಾಸ, ಮಿತಾಹಾರ ಸೇವನೆಯಿಂದ ನಮ್ಮ ದೇಹವನ್ನು ಚಳಿಗಾಲದ ಬದಲಾವಣೆಗೆ ಸಜ್ಜುಗೊಳಿಸಲು ಸಹಕಾರಿ, ಧ್ಯಾನ, ಜಪ ಇತ್ಯಾದಿಗಳಿಂದ ಮನಸ್ಸಿನ ಸಮತೋಲನ ಕಾಪಾಡಲು ಸಾಧ್ಯ. ಹಾಗಾಗಿ ಸಾತ್ವಿಕ ಆಹಾರದ ಸೇವನೆ ಈ ಸಮಯದಲ್ಲಿ ಅತ್ಯಂತ ಉತ್ತಮ.

'ನವ' ಎಂದರೆ ಇನ್ನೊಂದು ಅರ್ಥದಲ್ಲಿ 'ಹೊಸತು' ಎಂದೂ ಇದೆ. ಹಾಗಾಗಿ ನವನವೀನ ಸಮಾಜಮುಖೀ ಕಾರ್ಯಗಳು ನಮ್ಮ ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ಮುಖೇನ ಕಾರ್ಯಗತಗೊಳ್ಳುತ್ತಾ ಇರುವುದು ತುಂಬ ಸಂತಸದ ಹಾಗೂ ಹೆಮ್ಮೆಯ ವಿಷಯ. ಈ ಸಾಮಾಜಿಕ ಮೌಲ್ಯಗಳನ್ನು ಹೊಂದಿರುವ ಕಾರ್ಯಚಟುವಟಿಕೆಗಳಲ್ಲಿ ಯೋಗ ಶಿಬಿರ, ಆರೋಗ್ಯ ಸಂಬಂಧಿ ಶಿಬಿರಗಳನ್ನು ಕ್ಲಬ್ಬಿನ ವತಿಯಿಂದ ನಡೆಸುತ್ತಾ ಯಶಸ್ವೀ ವರ್ಷವನ್ನು ನಡೆಸುತ್ತಿರುವ ನಮ್ಮ ನೆಚ್ಚಿನ ಅಧ್ಯಕ್ಷರಿಗೆ ಈ ಮೂಲಕ ಅಭಿನಂದನೆಯನ್ನು ಸಲ್ಲಿಸಲು ಇಚ್ಛಿಸುತ್ತೇನೆ. ಎಲ್ಲರಿಗೂ ಶರನ್ನವರಾತ್ರಿಯ ಶುಭಾಶಯಗಳು.

ಧನ್ಯವಾದಗಳೊಂದಿಗೆ,

**ರೊ. ಡಾ. ಅನುಲೇಖ ಬಾಯರಿ.**

---

## ವಾರದ ಸಭೆಯ ವರದಿ

ದಿನಾಂಕ 26–09–2024ನೇ ವಾರದ ಸಭೆಯು ಕುಟುಂಬ ಸಮ್ಮಿಲನ ಕಾರ್ಯಕ್ರಮವಾಗಿದ್ದು, ನಮ್ಮ ಕ್ಲಬ್ಬಿನ ಕುಟುಂಬ ಸದಸ್ಯರ ಪ್ರತಿಭಾ ಪ್ರದರ್ಶನಕ್ಕೆ ಒಂದು ಸೂಕ್ತ ವೇದಿಕೆಯಾಗಿತ್ತು. ಕಾರ್ಯದರ್ಶಿ ರೊ. ಭರತ್ ಶೆಟ್ಟಿ ವಾರದ ವರದಿ ವಾಚನ ಮಾಡಿದರು. ರೊ. ಮನೋಹರ ಪೈ ವಾರದ ಚಿಂತನೆಯನ್ನು ಹಾಗೂ ರೊ. ಕೆ. ಕೆ. ಕಾಂಚನ್‌ರವರು ರೋಟರಿ ಮಾಹಿತಿಯನ್ನು ನೀಡಿದರು.

ಕ್ಲಬ್‌ನ ನೂತನ ಸದಸ್ಯರಾದ ರೊ. ಅನಿಲ್ ಡಿ' ಸಿಲ್ಲವರವರು ಈ ಸಾಂಸ್ಕೃತಿಕ ಕಾರ್ಯಕ್ರಮ ನಿರ್ವಹಣೆಯ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು. ಮೊದಲಿಗೆ ರೊ. ಶ್ರೀನಿವಾಸ್ ಶೇಟ್‌ರವರ ಕಂಚಿನ ಕಂಠದ ಮೂಲಕ ಸುಂದರವಾದ ಗೀತೆಗಳು ಮೂಡಿಬಂದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ರೊ. ಜೆರಾಲ್ಡ್ ಕ್ರಾಸ್ತ, ZL ರೊ. ಮಹೇಂದ್ರ ಶೆಟ್ಟಿ, ರೊ. ರಮಾನಂದ ಕಾರಂತ್, ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿ ಇವರ ನಗೆ ಚಟಾಕಿಗಳು ಎಲ್ಲರನ್ನೂ ನಗೆಗಡಲಿನಲ್ಲಿ ತೇಲುವಂತೆ ಮಾಡಿತು. ರೊ. ನಂದಾ ನಾಯಕ್‌ರವರ ಮೊಮ್ಮಕ್ಕಳಾದ ಆರುಷಿ & ರಿಷಿಯವರು ತಮ್ಮ ನೃತ್ಯದ ಮೂಲಕ ರಂಜಿಸಿದರು. ರೊ. ವಿನಾಯಕ್ ಪೈ ಇವರ ಮಕ್ಕಳಾದ ಅಮೋಘ್ ಮತ್ತು ಅಭಿನವ್ ನೃತ್ಯವನ್ನು ಪ್ರದರ್ಶಿಸಿದರು. ಆ್ಯನ್ ಶಾಂತಾ ಕಾಂಚನ್, ಆ್ಯನ್ ಸುಮಾ ಪುತ್ರನ್ ಮತ್ತು ಆ್ಯನ್ ರಶ್ಮಿ ಶೇಟ್ ಇವರು ಸಮೂಹ ಗಾಯನದ ಮೂಲಕ ಎಲ್ಲರನ್ನೂ ಸಂತೋಷಗೊಳಿಸಿದರು. ರೊ. ಔಜಲಿನ್ ರೆಬೆಲ್ಲೋರವರ ನೃತ್ಯ ಹಾಗೂ ಆ್ಯನ್ ರಶ್ಮಿ ಶೇಟ್‌ರವರ ನೃತ್ಯ ಎಲ್ಲರನ್ನೂ ಸಂತೋಷಗೊಳಿಸಿತು. ನಂತರ ನಡೆದ ಒಂದು ಸಣ್ಣ ಸ್ಪರ್ಧೆಯಲ್ಲಿ ರೊ. ಸತ್ಯನಾರಾಯಣ ಪುರಾಣಿಕರು ಜಯಗಳಿಸಿದರು.

ಈ ಕಾರ್ಯಕ್ರಮದ ಪ್ರಾಯೋಜಕರಾದ ರೊ. ಅರುಣ್ ಮೆಂಡೋನ್ಸ, ರೊ. ಕೃಷ್ಣ ಕಾಂಚನ್, ರೊ. ರಾಘವೇಂದ್ರ ಶೇಟ್‌ರವರನ್ನು ಅಧ್ಯಕ್ಷರು ಗುರುತಿಸಿ ಗೌರವಿಸಿದರು. ನಂತರ ಅಧ್ಯಕ್ಷರ ನುಡಿಯಲ್ಲಿ ನವೆಂಬರ್ 3 ರಂದು ನಡೆಯುವ Zonal Cultural Competition ಹಾಗೂ ನವೆಂಬರ್ 10ರಂದು ನಡೆಯುವ District Cultural Competitionಗೆ ಅಣಿಯಾಗಲು ವಿವಿಧ ತಂಡಗಳನ್ನು ರಚಿಸುವುದಾಗಿ ಹಾಗೂ ಎಲ್ಲಾ ಸದಸ್ಯರು ಸಕ್ರಿಯವಾಗಿ ಭಾಗವಹಿಸಲು ಕರೆ ನೀಡಿದರು. ರುಚಿಕರವಾದ ಭೋಜನದ ವ್ಯವಸ್ಥೆಯೊಂದಿಗೆ ಕಾರ್ಯಕ್ರಮವು ಉತ್ತಮ ರೀತಿಯಲ್ಲಿ ಸಂಪನ್ನಗೊಳಿಸಿತು.












## ಹುಟ್ಟುಹಬ್ಬದ ಶುಭಾಶಯಗಳು



**ರೊ. ಸುರೇಶ್ ಮಲ್ಯ**
**ದಿನಾಂಕ : ಅಕ್ಟೋಬರ್ 08**
**ಮೊಬೈಲ್ : 9448529925**

## ಕಳೆದ ವಾರದ ಚಿಂತನೆ

ನಮ್ಮ ಬದುಕಿನಲ್ಲಿ ನಿನ್ನೆ ಮತ್ತೊಮ್ಮೆ ಬರದು! ನಾಳೆ ಹೇಗಿರುತ್ತದೋ ಊಹಿಸಲಾಗದು! ಇಂದಿನ ದಿನಕ್ಕಾಗಿ ಬದುಕಿದರೆ ಇಡೀ ಜಗತ್ತನ್ನೇ ಸುಂದರಗೊಳಿಸಬಹುದು!! ಇಂದಿನ ದಿನ ಸುದಿನ!!! **ನೀಡಿದವರು : ರೊ. ಪಿ. ಮನೋಹರ್**

## ನಾರಾಯಣ ವಿಶೇಷ ಮಕ್ಕಳ ಶಾಲೆಯಲ್ಲಿ ನಡೆದ ವಿಶೇಷ ಮಕ್ಕಳ ಆರೈಕೆ ಹಾಗೂ ಕಾಳಜಿ ಕುರಿತು ಉಪನ್ಯಾಸ

ತಾ. 27–09–2024ರಂದು ತಲ್ಲೂರಿನ 'ನಾರಾಯಣ ವಿಶೇಷ ಮಕ್ಕಳ ಶಾಲೆ"ಯಲ್ಲಿ ನಮ್ಮ ಕ್ಲಬ್ಬಿನ ಸದಸ್ಯರಾದ ರೊ. ಡಾ. ನಾಗೇಶ್‌ರವರು "ವಿಶೇಷ ಮಕ್ಕಳ ಆರೈಕೆ ಹಾಗೂ ಕಾಳಜಿ" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ನೀಡಿದರು. ಇದರೊಂದಿಗೆ ಸರಕಾರಿ ಆಸ್ಪತ್ರೆಯ Hearing and speech ವಿಭಾಗದ ವೈದ್ಯರನ್ನು ಈ ವಿಶೇಷ ಮಕ್ಕಳ ಶಾಲೆಗೆ ಮಕ್ಕಳ ತಪಾಸಣೆಗೆ ನಿಯಮಿತವಾಗಿ ಕಳುಹಿಸಲು ಪ್ರಯತ್ನಿಸುತ್ತೇವೆ ಎಂದರು. ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸ ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಾಲಾಭಿವೃದ್ಧಿ ಸಮಿತಿಯ ಸದಸ್ಯರು, ಮಕ್ಕಳ ಪೋಷಕರು ಮಕ್ಕಳೊಂದಿಗೆ ಈ ಸಭೆಯಲ್ಲಿ ಪಾಲ್ಗೊಂಡು ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು.









## ಸದಸ್ಯರ ಅವಗಾಹನೆಗಾಗಿ

**ತಾ. 30–09–2024ರಂದು ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳ Zone1 ರ ವರದಿಯೊಂದಿಗೆ Zonal Review ಸಭೆಯನ್ನು ಕರೆಯಲಾಗಿದೆ.**

